# ಜಗದುದ್ಧಾರನ ಆಡಿಸಿದಳೆಶೋದೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings match well in these above books and also with the singer.

ರಾಗ: ಹಿಂದೂಸ್ತಾನಿ ಕಾಪಿ ತಾಳ: ಕಾನಡ

ಜಗದುದ್ಧಾರನ ಆಡಿಸಿದಳೆಶೋದೆ || ಪ ||

ಜಗದುದ್ಧಾರನ ಮಗನೆಂದು ತಿಳಿಯುತ
ಸುಗುಣಾಂತ ರಂಗನ ಆಡಿಸಿದಳೆಶೋದೆ || ಅಪ ||

ನಿಗಮಕೆ ಸಿಲುಕದ ಅಗಣಿತ ಮಹಿಮನ
ಮಗುಗಳ ಮಾಣಿಕ್ಯನ ಆಡಿಸಿದಳೆಶೋದೆ || ೧ ||

ಅಣೋರಣೀಯನ ಮಹತೋ ಮಹೀಯನ
ಅಪ್ರಮೇಯನ ಆಡಿಸಿದಳೆಶೋದೆ || ೨ ||

ಪರಮ ಪುರುಷನ ಪರವಾಸುದೇವನ
ಪುರಂದರ ವಿಠಲನ ಆಡಿಸಿದಳೆಶೋದೆ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಜಗದುದ್ಧಾರನ** – ಜಗತ್ತನ್ನು ಎತ್ತಿ (ಉತ್) ಹಿಡಿದು (ಧೃ) ಕಾಪಾಡುವವನನ್ನು.

**ಸುಗುಣಾಂತ ರಂಗನ** – ಸತ್ತ್ವಗುಣವೊಂದೇ ಸ್ವಭಾವವಾಗಿ ಉಳ್ಳವನನ್ನು.

**ನಿಗಮಕೆ ಸಿಲುಕದ** – ವೇದಗಳು ಕೂಡ ಯಾವನ ನೆಲೆಯನ್ನು ಅರಿಯಲಾರವೋ ಅವನ.

**ಅಗಣಿತ ಮಹಿಮನ** – ಯಾವನ ಹಿರಿಮೆಯನ್ನು ಇಷ್ಟೆಂದು ಹೇಳಬರುವುದಿಲ್ಲವೋ ಅವನ.

**ಅಣೋರಣೀಯನ...** –ಅತಿ ಸಣ್ಣದಾದ ಅಣುವಿಗಿಂತ ಸಣ್ಣವನು (ಅದರಲ್ಲೂ ಅಂತರ್ಯಾಮಿಯಾಗಿ ಸೂಕ್ಷ್ಮವಾಗಿರುವನು); ಅತಿ ದೊಡ್ಡದಕ್ಕಿಂತ (ಎಂದರೆ ಆಕಾಶಕ್ಕಿಂತ) ದೊಡ್ಡವನು (ಅದೂ ಅವನಲ್ಲಿಯೇ ನೆಲೆಗೊಂಡಿದೆಯಾಗಿ), ಎಂದರೆ ಸರ್ವವ್ಯಾಪಿ, ಸರ್ವಾಧಾರ.

**Classification:** Keerthane
**Ankita:** purandara vittala
**Location:** Malur, near Channapatna, on Bangalore Mysore Road. The murthy is very beautiful and is made out of black granite. The main deity is Apremeya Swamy. This Balakrishna murthy is at the back of the Apremeya Swamy Garbha Griha.
**Category:** Krishna Stuti
**Group Words:** yashode, ranga, Krishna, aprameya,
**Pravachana:** Vid. Anantha Krishna Acharya
**Explanation:** NA